# Outcome of the Eighth Biennial Meeting on the UN Programme of Action to prevent, combat and eradicate illicit trade & International Tracing Instrument for illicit small arms and light weapons

July 04, 2022

# ಯುಎನ್ ಕಾರ್ಯಕ್ರಮವಾದ ಅಕ್ರಮ ವ್ಯಾಪಾರವನ್ನು ತಡೆಗಟ್ಟಲು, ಹೋರಾಡಲು ಮತ್ತು ನಿರ್ಮೂಲನೆ ಮಾಡಲು ಹಾಗೂ ಅಕ್ರಮ ಸಣ್ಣ ಶಸ್ತ್ರಾಸ್ತ್ರಗಳು ಮತ್ತು ಲಘು ಶಸ್ತ್ರಾಸ್ತ್ರಗಳಿಗಾಗಿ ಅಂತರರಾಷ್ಟ್ರೀಯ ಟ್ರೇಸಿಂಗ್ ಉಪಕರಣದ ಬಗ್ಗೆ ನಡೆದ ಎಂಟನೇ ದ್ವೈವಾರ್ಷಿಕ ಸಭೆಯ ನಡವಳಿಗಳು .

ಜುಲೈ 04, 2022

ಸಭೆಯಲ್ಲಿ ಭಾಗವಹಿಸಿದ ಭಾರತವು ಯುಎನ್ ಪ್ರೋಗ್ರಾಂ ಆಫ್ ಆಕ್ಷನ್ ಮತ್ತು ಇಂಟರ್ನ್ಯಾಷನಲ್ ಟ್ರೇಸಿಂಗ್ ಇನ್ಸ್ಟ್ರುಮೆಂಟ್‌ನ ಸಂಪೂರ್ಣ ಮತ್ತು ಪರಿಣಾಮಕಾರಿ ಅನುಷ್ಠಾನದ ಪ್ರಾಮುಖ್ಯತೆಯನ್ನು ಒತ್ತಿ ಹೇಳಿತು, ವಿಶೇಷವಾಗಿ ಭಯೋತ್ಪಾದನೆಯ ಬೆದರಿಕೆಯನ್ನು ಪ್ರಮುಖ ಜಾಗತಿಕ ಸವಾಲಾಗಿ ಎದುರಿಸುವಲ್ಲಿ ಅವುಗಳ ಮಹತ್ವವೂ ಸೇರಿದಂತೆ .

ಸಣ್ಣ ಶಸ್ತ್ರಾಸ್ತ್ರ ಮತ್ತು ಲಘು ಶಸ್ತ್ರಾಸ್ತ್ರಗಳ (ಎಸ್ಎಎಲ್‌ಡಬ್ಲ್ಯು) ಅಕ್ರಮ ವ್ಯಾಪಾರವನ್ನು ತಡೆಗಟ್ಟಲು, ಹೋರಾಡಲು ಮತ್ತು ನಿರ್ಮೂಲನೆ ಮಾಡಲು ಯುಎನ್ ಕಾರ್ಯಕ್ರಮದ ಅನುಷ್ಠಾನದ ಮತ್ತು ಅಕ್ರಮ ಎಸ್ಎಎಲ್‌ಡಬ್ಲ್ಯುಗಾಗಿ ಅಂತರರಾಷ್ಟ್ರೀಯ ಟ್ರೇಸಿಂಗ್ ಉಪಕರಣದ ಬಗ್ಗೆ ರಾಜ್ಯಗಳ ಎಂಟನೇ ದ್ವೈವಾರ್ಷಿಕ ಸಭೆಯನ್ನು ನ್ಯೂಯಾರ್ಕ್‌ನಲ್ಲಿ ಜೂನ್ 27 ರಿಂದ 1 ಜುಲೈ 2022 ರವರೆಗೆ ನಡೆಸಲಾಯಿತು. ಸಭೆಯು ಎಸ್ಎಎಲ್‌ಡಬ್ಲ್ಯೂ ಅಕ್ರಮ ಸಾಗಾಣಿಕೆ ವಿರುದ್ಧ ಕ್ರಿಯೆಯ ಕಾರ್ಯಕ್ರಮ ಮತ್ತು ಇಂಟರ್ನ್ಯಾಶನಲ್ ಟ್ರೇಸಿಂಗ್ ಇನ್ಸ್ಟ್ರುಮೆಂಟ್‌ನ ಅನುಷ್ಠಾನವನ್ನು ಬಲಪಡಿಸುವ ಗುರಿಯನ್ನು ಹೊಂದಿರುವ ನಡವಳಿಯ ದಾಖಲೆಯನ್ನು ಅಂಗೀಕರಿಸಿತು .. ಭಾರತವು ಎಸ್ಎಎಲ್‌ಡಬ್ಲ್ಯುನಲ್ಲಿ ಅಕ್ರಮ ವ್ಯಾಪಾರವನ್ನು ನಿಯಂತ್ರಿಸುವ ಸಲುವಾಗಿ ಸುಧಾರಿತ ರಾಷ್ಟ್ರೀಯ ಪ್ರಯತ್ನಗಳ ಮೂಲಕ ಈ ಉಪಕರಣಗಳ ಅನುಷ್ಠಾನವನ್ನು ಬಲಪಡಿಸುವಂತೆ ಒತ್ತಾಯಿಸಿತು ಹಾಗೂ ಅದನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ಅಕ್ರಮ ಎಸ್ಎಎಲ್‌ಡಬ್ಲ್ಯು ಅನ್ನು ಪತ್ತೆಹಚ್ಚುವ ಕಾರ್ಯವಿಧಾನವನ್ನು ಅಭಿವೃದ್ಧಿಪಡಿಸುವಂತೆ ತಿಳಿಸಿತು. ಭಾರತವು ಅಂತರರಾಷ್ಟ್ರೀಯ ಸಹಕಾರ ಮತ್ತು ಸಹಾಯದ ಪ್ರಾಮುಖ್ಯತೆಯನ್ನು ಒತ್ತಿಹೇಳಿತು, ವಿಶೇಷವಾಗಿ ಈ ಉಪಕರಣಗಳ ಅನುಷ್ಠಾನದಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಬೆಂಬಲವನ್ನು ಹಾಗೂ ಅವರಿಗೆ ಫೆಲೋಶಿಪ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ನಿಟ್ಟಿನಲ್ಲಿ .

ಎಂಟನೇ ದ್ವೈವಾರ್ಷಿಕ ಸಭೆಯ ನಡವಳಿಯ ದಾಖಲೆಯು ಭಯೋತ್ಪಾದನೆಯನ್ನು ಉಲ್ಬಣಗೊಳಿಸುವಲ್ಲಿ ಅಕ್ರಮ ಶಸ್ತ್ರಾಸ್ತ್ರ ವ್ಯಾಪಾರದ ದುಷ್ಪರಿಣಾಮಗಳನ್ನು

ಗುರುತಿಸಿರುತ್ತದೆ ಹಾಗೂ ಭಯೋತ್ಪಾದನೆಯಿಂದ ಉಂಟಾಗಿರುವ ಬೆದರಿಕೆಯನ್ನು ಪರಿಹರಿಸುವಲ್ಲಿ ಈ ಯುಎನ್ ಉಪಕರಣಗಳ ಪಾತ್ರವನ್ನು ಒತ್ತಿಹೇಳುತ್ತದೆ. ಇದು ಎಸ್ಏಎಲ್ಡಬ್ಲ್ಯು ನ ಸಂಪೂರ್ಣ ಜೀವನಚಕ್ರವನ್ನು ನಿಗ್ರಹಿಸಲು ಸಾಕಷ್ಟು ರಾಷ್ಟ್ರೀಯ ನಿಯಂತ್ರಣಗಳನ್ನು ಜಾರಿಗೊಳಿಸುವ ಮತ್ತು ಅನ್ವಯಿಸುವ ರಾಜ್ಯಗಳ ಸಂಕಲ್ಪವನ್ನು ದೃಢಪಡಿಸಿತು. ಅಕ್ರಮ ಸಣ್ಣ ಶಸ್ತ್ರಾಸ್ತ್ರಗಳ ಪತ್ತೆ ಕ್ರಮಗಳನ್ನು ಬಲಪಡಿಸಲು ಮತ್ತು ಯು ಎನ್ ನ ಸಹಯೋಗದೊಂದಿಗೆ ಅವುಗಳನ್ನು ಪತ್ತೆಹಚ್ಚುವಲ್ಲಿ ಅಂತರರಾಷ್ಟ್ರೀಯ ಸಹಕಾರವನ್ನು ಹೆಚ್ಚಿಸುವ ವಿಧಾನಗಳನ್ನು ಅನ್ವೇಷಿಸಲು ಸಹ ರಾಜ್ಯಗಳು ಒಪ್ಪಿಕೊಂಡಿರುತ್ತವೆ. ಸಭೆಯು ಎಸ್ಏಎಲ್ಡಬ್ಲ್ಯು ಕ್ಷೇತ್ರದಲ್ಲಿನ ಇತ್ತೀಚಿನ ತಾಂತ್ರಿಕ ಬೆಳವಣಿಗೆಗಳ ಪರಿಣಾಮಗಳನ್ನು ಕೂಡ ಪರಿಗಣಿಸಿತು, ಅಕ್ರಮ ಕಳ್ಳಸಾಗಣೆಯ ಬಗೆಗಿನ ಕಾಳಜಿ ಮತ್ತು ಉಪಕರಣಗಳ ಮೇಲೆ ಅವುಗಳಿಂದಾಗಿ ಉಲ್ಬಣಗೊಳ್ಳುತ್ತಿರುವ ಪರಿಣಾಮಗಳನ್ನು ಪರಿಹರಿಸುವ ಮಾರ್ಗಗಳೂ ಸೇರಿದಂತೆ.

2024 ರಲ್ಲಿ ನಾಲ್ಕನೇ ಪರಿಶೀಲನಾ ಸಮ್ಮೇಳನವನ್ನು ಮನದಲ್ಲಿಟ್ಟುಕೊಂಡು, ನಡವಳಿಯ ದಾಖಲೆಯು ಈ ಎರಡು ಯುಎನ್ ಉಪಕರಣಗಳ ಅನುಷ್ಠಾನದಲ್ಲಿನ ಪ್ರವೃತ್ತಿಗಳು, ಸವಾಲುಗಳು ಮತ್ತು ಅವಕಾಶಗಳ ಸಮಗ್ರ ವಿಶ್ಲೇಷಣೆಯನ್ನು ಹಾಗೂ ಅವುಗಳ ಪರಿಣಾಮಕಾರಿ ಅನುಷ್ಠಾನದ ಕುರಿತು ಶಿಫಾರಸುಗಳನ್ನು ಪರಿಗಣಿಸಲು . ಒಪ್ಪಿಕೊಂಡಿತು .

**ನವದೆಹಲಿ**
**ಜುಲೈ 04, 2022**

DISCLAIMER: This is an approximate translation. The original is available in English on MEA's website and may be referred to as the official press release.